ಮಹಾಮಸ್ತಕಾಭಿಷೇಕದ ಅಂಗವಾಗಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ 20.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಇ. ಹೌದು, ಸರ್ಕಾರದ ಆದೇಶ ಸಂಖ್ಯೆ:ಕಂಇ 287 ಎಂಇಟಿ 92 ದಿ:26–3–1993 ರಲ್ಲಿ ವಿಶೇಷಾಧಿಕಾರಿಯವರನ್ನು ನೇಮಕ ಮಾಡಿದೆ. ಸದರಿ ಅಧಿಕಾರಿಗೆ ಬೇಕಾಗಿರುವ ಸಿಬ್ಬಂದಿಯನ್ನು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದಲೇ ಒದಗಿಸಲು ಸೂಚಿಸಲಾಗಿದೆ.

ಈ. ಮಹಾ ಮಸ್ತಕಾಭಿಷೇಕದ ಕಾರ್ಯಕ್ರಮದ ಅಂಗವಾಗಿ ವಿವಿಧ ಇಲಾಖೆಗಳ ಕಾಮಗಾರಿಗಳು ನಡೆಯಬೇಕಾಗಿದ್ದು ಅದರ ಸಂಬಂಧಿತ ಕಛೇರಿಗಳಿಲ್ಲವು ಬೆಂಗಳೂರಿನಲ್ಲೇ ಇದ್ದು ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಅನುಕೂಲವಾಗಿರುವುದರಿಂದ ವಿಶೇಷಾಧಿಕಾರಿಯವರ ಕೇಂದ್ರ ಸ್ಥಾನವನ್ನು ಬೆಂಗಳೂರಿನಲ್ಲಿಯೇ ಇಡಬೇಕೆಂದು ಪರಿಗಣಿಸಿ ಇವರು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

ಅನಧಿಕೃತ ಕಟ್ಟಡಗಳ ಬಗ್ಗೆ ನಿರ್ಮಾಣಗಳನ್ನು ತಡೆಯುವುದರ ಬಗ್ಗೆ

(2058): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಅನಧಿಕೃತ ನಿರ್ಮಾಣಗಳ ತಡೆ ಕಛೇರಿಯು ಬೆಂಗಳೂರು ನಗರದಲ್ಲಿ ಇರುವುದು ನಿಜವೇ;

ಆ. ಎಷ್ಟು ಜನ ಗ್ರೂಪ್–ಬಿ ಅಧಿಕಾರಿಗಳು, ಗ್ರೂಪ್–ಸಿ ಅಧಿಕಾರಿಗಳು ಈ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವರು;

ಇ. ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ತಡೆಯುವ ಬದಲು ಜಾಸ್ತಿಯಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. 1989 ರಿಂದ 1992 ಡಿಸೆಂಬರ್ ಅಂತ್ಯದವರೆಗೆ ಎಷ್ಟು ಅನಧಿಕೃತ ನಿರ್ಮಾಣಗಳನ್ನು ತಡೆ ಹಿಡಿಯಲಾಗಿದೆ;

ಉ. ಈ ಕಛೇರಿಯಿಂದ ಸರ್ಕಾರಕ್ಕೆ ಏನಾದರೂ ಉಪಯೋಗವಾಗಿದೆಯೇ;

ಊ. ಇಲ್ಲದಿದ್ದಲ್ಲಿ ಈ ಕಛೇರಿಯನ್ನು ಮುಚ್ಚಲು ಸರ್ಕಾರವು ಕ್ರಮಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. 5 ಜನ ಗ್ರೂಪ್–ಬಿ ಅಧಿಕಾರಿಗಳು
71 ಜನ ಗ್ರೂಪ್–ಸಿ ನೌಕರರು

ಇ. ಬಂದಿರುತ್ತದೆ.

ಈ. 12,738 ಕಟ್ಟಡಗಳು

ಉ. ಉಪಯೋಗವಿದೆ. ಈ ಕೆಲಸದ ಜೊತೆಗೆ ಈ ಸಿಬ್ಬಂದಿಯು ವಿವಿಧ ಇಲಾಖೆಗಳ ಸರ್ಕಾರಿ ಬಾಕಿ ಹಣವನ್ನು ಕೂಡ ವಸೂಲು ಮಾಡುತ್ತಾರೆ.

ಊ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಟಿ. ನರಸೀಪುರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ

(1589): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಟಿ. ನರಸೀಪುರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಬಂದಿದ್ದಲ್ಲಿ; ಯಾವಾಗ ಕೆಲಸ ಪ್ರಾರಂಭಿಸುವಿರಿ, ಹಾಗೂ ಅದಕ್ಕೆ ತಗಲುವ ವೆಚ್ಚವೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಬಂದಿದೆ.

ಆ. ಪರಿಶೀಲನೆಯಲ್ಲಿದೆ

ಮಾತೃ ಇಲಾಖೆಯಿಂದ ಬೇರೆ ಇಲಾಖೆಗೆ ಸರ್ಕಾರಿ ನೌಕರರ ಪ್ರತಿನಿಯೋಜನೆಯ ಗರಿಷ್ಠ ಅವಧಿ

(1591): ಶ್ರೀ ಕೆ.ಸಿ. ಮೊಡ್ಡೇಕರ್ ದೇಸಾಯಿ (ಹಿರೇಬಾಗೇವಾಡಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಾತೃ ಇಲಾಖೆಯಿಂದ ಸರ್ಕಾರದ ಬೇರೆ ಇಲಾಖೆಗೆ ಸರ್ಕಾರಿ ನೌಕರರ ಪ್ರತಿನಿಯೋಜನೆಯ ಗರಿಷ್ಠ ಅವಧಿ ಬಗ್ಗೆ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳು;

ಆ. ಪ್ರತಿನಿಯೋಜನೆ ಗರಿಷ್ಠ ಅವಧಿಯನ್ನು ಮೀರಿ ಬೆಳಗಾವಿ ಜಿಲ್ಲಾಧಿಕಾರಿಗಳ ಬೆಳಗಾವಿ ಕಛೇರಿಗಳಲ್ಲಿ ಪ್ರತಿನಿಯೋಜನೆ ಮೇಲೆ ಇರುವ ನೌಕರರ ಸಂಖ್ಯೆ (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ. ಅಂತಹ ಸರ್ಕಾರಿ ನೌಕರರನ್ನು ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಐದು ವರ್ಷಗಳು

ಆ. ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಸಹಾಯಕ (ಪ್ರಥಮ ದರ್ಜೆ ಸಹಾಯಕ) ವೃಂದದ ನೌಕರರೊಬ್ಬರು ಮಾತ್ರ ದಿನಾಂಕ: 8–6–89ರಿಂದ ಚಿಕ್ಕೋಡಿ ಉಪ–ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರತಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ. ಹಿಂದಿರುಗಿಸುವ ಪ್ರಶ್ನೆ ಸಧ್ಯಕ್ಕೆ ಉದ್ಭವಿಸುವುದಿಲ್ಲ.